**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಎಂವೈಎಸ್\1420\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:20/11/2020

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ 1) ಶ್ರೀ.ಟಿ.ಎ.ಮಹದೇವ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸವ್ವೆ ಗ್ರಾಮ ಪಂಚಾಯತ್ ಮತ್ತು 2)ಡಾ॥ಶರತ್‌ಕುಮಾರ್.ಎನ್.ಎಸ್, ಸಹಾಯಕ ನಿರ್ದೇಶಕರು, ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವೆಗಳು [ಪ್ರಸ್ತುತ ಕಲ್ಲಹಳ್ಳಿ, ಹುಣಸೂರು ತಾಲ್ಲೂಕ್] ಹೆಚ್.ಡಿ.ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕ್ ಕಸಬಾ ಹೋಬಳಿ ಸವ್ವೆ ಗ್ರಾಮದ ನಿವಾಸಿಯಾದ ಶ್ರೀಮತಿ.ಸಣ್ಣಮ್ಮ ಕೋಂ ಹೆಚ್.ಆರ್.ಕೃಷ್ಣಪ್ಪ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸವ್ವೆ ಗ್ರಾಮ ಪಂಚಾಯತ್, ಹೆಚ್.ಡಿ.ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ [ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ] ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಎಂಜಿಎನ್‌ಆರ್‌ಇಜಿ ಯೋಜನೆ ಅಡಿ 2017-18ನೇ ಸಾಲಿನಲ್ಲಿ ಸವ್ವೆ ಗ್ರಾಮ ಪಂಚಾಯತ್‌ನಿಂದ ಮನೆಯಲ್ಲಿ ಕೊಟ್ಟಿಗೆ ನಿರ್ಮಾಣ ಮಾಡಲು ಸರ್ಕಾರದಿಂದ ಸಹಾಯ ಧನ ಮಂಜೂರಾಗಿದ್ದು, ಸದರಿ ಕೊಟ್ಟಿಗೆಯ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದರೂ ಸಹ ಎದುರುದಾರರು ಸಹಾಯ ಧನವನ್ನು ಮಂಜೂರು ಮಾಡಿಲ್ಲ. ಈಗಾಗಲೇ ₹5,000/-ವನ್ನು ಎದುರುದಾರರು ದೂರುದಾರರಿಂದ ಪಡೆದಿದ್ದು, ಇನ್ನೂ ಹೆಚ್ಚಿನ ₹5,000/-ವನ್ನು ನೀಡಲು ಎದುರುದಾರರು ಒತ್ತಾಯಿಸುತ್ತಿದ್ದಾರೆ. ತಮಗೆ ಮಂಜೂರಾಗಿರುವ ಸಹಾಯ ಧನವನ್ನು ಕೊಡಿಸುವಂತೆ ಕೋರಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ -

ದಿನಾಂಕ:01/12/17ರಂದು ದೂರುದಾರರು ಗ್ರಾಮ ಪಂಚಾಯತ್‌ಗೆ ಸುಳ್ಳು ಮಾಹಿತಿ ನೀಡಿ, ಸರ್ಕಾರದಿಂದ ಸೌಲಭ್ಯ ಪಡೆಯಲು ಬಯಸಿದ್ದಾರೆ. ಅಕ್ಕಪಕ್ಕದ ಮನೆಗಳಿಂದ ದನಗಳನ್ನು ತಂದು ಫೋಟೋ ತೆಗೆಸಿಕೊಟ್ಟಿದ್ದಾರೆ. ಜಾನುವಾರು ಕೊಟ್ಟಿಗೆ ನಿರ್ಮಾಣ ಮಾಡಬೇಕಾದರೆ ಜಾನುವಾರುಗಳು ಇರಬೇಕು. ಆದರೆ, ದೂರುದಾರರು ಜಾನುವಾರುಗಳನ್ನು ಹೊಂದಿಲ್ಲದಿರುವುದು ಸ್ಥಳ ಪರಿಶೀಲನಾ ಸಮಯದಲ್ಲಿ ಕಂಡು ಬಂದಿದೆ. ಆದ್ದರಿಂದ, ಸದರಿಯವರಿಗೆ ಸಹಾಯ ಧನ ಮಂಜೂರಾತಿ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಸವ್ವೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ 1) ಶ್ರೀ.ಟಿ.ಎ.ಮಹದೇವ, 2) ಶ್ರೀಮತಿ.ಪುಟ್ಟಮ್ಮ, ಅಂದಿನ ಅಧ್ಯಕ್ಷರು, 3) ಡಾ॥ಶರತ್ ಕುಮಾರ್.ಎನ್.ಎಸ್, ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಕಲ್ಲಹಳ್ಳಿ (ಹಿಂದೆ ಹೆಚ್.ಡಿ.ಕೋಟೆ) ಮತ್ತು 4) ಶ್ರೀ.ಜಿ.ಡಿ.ಶಂಕರ್, ತಾಂತ್ರಿಕ ಸಹಾಯಕರು, ಎಂಜಿಎನ್‌ಆರ್‌ಇಜಿ, ತಾಲ್ಲೂಕ್ ಪಂಚಾಯತ್, ಹೆಚ್.ಡಿ.ಕೋಟೆ ರವರುಗಳನ್ನು ಕ್ರಮವಾಗಿ 1 ರಿಂದ 4ನೇ ಎದುರುದಾರರುಗಳನ್ನಾಗಿ ಸೇರಿಸಿ, ಸದರಿಯವರುಗಳಿಂದ ಆಕ್ಷೇಪಣೆಗಳನ್ನು ಕೇಳಲಾಯಿತು.

6. ಒಂದನೇ (1ನೇ) ಎದುರುದಾರರು ತಮ್ಮ ಅಕ್ಷೇಪಣೆಯಲ್ಲಿ, ತಾವು ಈ ಹಿಂದೆ ಸಲ್ಲಿಸಿದ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

7. ಎರಡನೇ (2ನೇ) ಎದುರುದಾರರು ತಮ್ಮ ಅಕ್ಷೇಪಣೆಯಲ್ಲಿ, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

8. ಮೂರನೇ (3ನೇ) ಎದುರುದಾರರು ತಮ್ಮ ಅಕ್ಷೇಪಣೆಯಲ್ಲಿ –

ತಾವು ಈ ಹಿಂದೆ ಸಹಾಯಕ ನಿರ್ದೇಶಕರಾಗಿ, ಪಶು ಆಸ್ಪತ್ರೆ, ಹೆಚ್.ಡಿ.ಕೋಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ದೂರುದಾರರು ದಿ:18/09/17ರಂದು ದನದ ಕೊಟ್ಟಿಗೆ ನಿರ್ಮಾಣ ಮಾಡಿಕೊಳ್ಳಲು ಶಿಫಾರಸ್ಸು ಪತ್ರವನ್ನು ಕೋರಿದ ಪ್ರಯುಕ್ತ ಸಿಬ್ಬಂದಿಯವರನ್ನು ಕಳುಹಿಸಿ ಸ್ಥಳ ತನಿಖೆ ಮಾಡಿ, ಜಾನುವಾರುಗಳನ್ನು ಸಾಕಲು ಸದರಿಯವರು ಆಸಕ್ತಿ ಹೊಂದಿದ್ದು ಹಾಗೂ ದನ ಕರುಗಳು ಇರುವ

ಪ್ರಯುಕ್ತ ಕೊಟ್ಟಿಗೆ ನಿರ್ಮಾಣದ ಅವಶ್ಯಕತೆ ಇರುತ್ತದೆಂದು ತಿಳಿದು ಬಂದಿದೆ. ಆ ಸಂಬಂಧವಾಗಿ ಕೊಟ್ಟಿಗೆ ಅವಶ್ಯಕತೆಗಾಗಿ ನಿರ್ಮಾಣ ಮಾಡಲು ಶಿಫಾರಸ್ಸು ಪತ್ರವನ್ನು ನೀಡಲಾಗಿದೆ.

9. ನಾಲ್ಕನೇ (4ನೇ) ಎದುರುದಾರರು ತಮ್ಮ ಅಕ್ಷೇಪಣೆಯಲ್ಲಿ –

ಗ್ರಾಮ ಪಂಚಾಯತ್‌ನ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳಿಗೆ ಸ್ಥಳ ಪರಿಶೀಲಿಸಿ, ಅಂದಾಜು ಪಟ್ಟಿ ತಯಾರಿಸಿ, ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಾಗಿ ಅಂದಾಜು ಪಟ್ಟಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗೆ ಸಲ್ಲಿಸುವುದು ತಮ್ಮ ಕರ್ತವ್ಯ ಆಗಿದೆ. ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಯಾದ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಹಾಗೂ ಕಾರ್ಯಾದೇಶವನ್ನು ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ನೀಡಿ ಇಎನ್‌ಎಂಆರ್ ಅನ್ನು ಸದರಿ ಫಲಾನುಭವಿಗೆ ಕಾಮಗಾರಿಯನ್ನು ಪ್ರಾರಂಭಿಸಲು ನೀಡಬೇಕಾಗಿದೆ. ಆದರೆ ದೂರಿಗೆ ಸಂಬಂಧಿಸಿದ ಕಾಮಗಾರಿಗೆ ಯಾವುದೇ ಇಎನ್‌ಎಂಆರ್ ಮತ್ತು ಕಾರ್ಯಾದೇಶವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ನೀಡಿಲ್ಲ. ಇಎನ್‌ಎಂಆರ್ ಪ್ರತಿಯಿಲ್ಲದೆ ಅಕುಶಲ ಕೂಲಿ ಕಾರ್ಮಿಕರು ಕೊಟ್ಟಿಗೆ ಕೆಲಸ ಮಾಡಲು ಸಾಧ್ಯವಾಗಿಲ್ಲ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ದೂರುದಾರರಿಗೆ ದನದ ಕೊಟ್ಟಿಗೆ ನಿರ್ಮಾಣ ಮಾಡುವ ಬಗ್ಗೆ ಸವ್ವೆ ಗ್ರಾಮ ಪಂಚಾಯತ್‌ನಿಂದ ಕ್ರಿಯಾ ಯೋಜನೆ ಅನುಮೋದನೆಗೊಂಡ ದಾಖಲೆಗಳು ಲಭ್ಯವಿಲ್ಲ. ಅನುಮೋದಿತ ಕ್ರಿಯಾ ಯೋಜನೆ ಇಲ್ಲದಿದ್ದರೂ, "ಹೆಚ್.ಡಿ.ಕೋಟೆ ತಾಲ್ಲೂಕ್ ಸವ್ವೆ ಗ್ರಾಮದ ಶ್ರೀಮತಿ.ಸಣ್ಣಮ್ಮ ಕೋಂ ಕೃಷ್ಣಪ್ಪ.ಹೆಚ್.ಆರ್ (ದೂರುದಾರರು) ರವರ ಮನೆಯಲ್ಲಿ ಕೊಟ್ಟಿಗೆ ನಿರ್ಮಾಣ" (ಅಂದಾಜು ಮೊತ್ತ ₹0.43 ಲಕ್ಷ) ಕಾಮಗಾರಿಯನ್ನು 2017-18ನೇ ಸಾಲಿನ ಎಂಜಿಎನ್‌ಆರ್‌ಇಜಿ ಯೋಜನೆಯಡಿ ನಿರ್ವಹಿಸುವ ಬಗ್ಗೆ 4ನೇ ಎದುರುದಾರರು ಅಂದಾಜು ಪಟ್ಟಿಯನ್ನು ತಯಾರಿಸಿದ್ದಾರೆ. ಸದರಿ ಅಂದಾಜು ಪಟ್ಟಿಯ Abstract ಈ ಕೆಳಗಿನಂತಿದೆ –

| Sl.No. | Item | Amount ₹ |
|---|---|---|
| 1 | Labour Component | 14561.82 |
| 2 | Material Component | 28438.18 |
| | **Grand total** | **43000.00** |

2) ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು (09/17-18ರಂತೆ) ದಿ:14/07/17ರಂದು ನೀಡಿದೆಯೆಂದು ಅಂದಾಜು ಪಟ್ಟಿಯ ಕೊನೆಯ ಪುಟದಲ್ಲಿ ಸವ್ವೆ ಗ್ರಾಮ ಪಂಚಾಯತ್‌ನ ಮೊಹರನ್ನು

ಹಾಕಿದ್ದಲ್ಲದೇ, ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಮೊಹರನ್ನೂ ಹಾಕಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಸಹಿ ಇಲ್ಲ;

3) ದೂರುದಾರರು ದೂರಿನೊಂದಿಗೆ ಹಾಜರುಪಡಿಸಿದ ದಾಖಲೆಗಳನ್ವಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಡಿಯಲ್ಲಿ ದೂರುದಾರರ ಬಾಬ್ತು ಕೊಟ್ಟಿಗೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿಯ ಸಂಖ್ಯೆ (ಸಂ.1522001016) ಯನ್ನು ಪಂಚಾಯತ್ ವತಿಯಿಂದ ನೀಡಿರುವುದು ಕಂಡು ಬಂದಿದೆ. ಗ್ರಾಮ ಪಂಚಾಯತ್‌ನಿಂದ ಕ್ರಿಯಾ ಯೋಜನೆ ಅನುಮೋದನೆಗೊಳ್ಳದೇ, ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿಕೊಂಡು ಕಾಮಗಾರಿಯ ಸಂಖ್ಯೆಯನ್ನು ಸಹ ಪಂಚಾಯತ್‌ನಿಂದಲೇ ನೀಡಿದೆ;

4) ದೂರುದಾರರು ದೂರಿನೊಂದಿಗೆ ಭಾವಚಿತ್ರಗಳು, ತಾಂತ್ರಿಕ ಕಾರ್ಯಸಾಧ್ಯತೆ ವರದಿ, ಸಣ್ಣ \ ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ, ಸ್ಥಳ ಪರಿವೀಕ್ಷಣಾ ವರದಿ, ದಿ:07/07/17ರ ವರದಿ, ಉದ್ಯೋಗ ಖಾತರಿ ಯೋಜನೆಯಡಿ ಸಲ್ಲಿಸಿರುವ 'ಕೆಲಸಕ್ಕೆ ಅರ್ಜಿ', 'ಕೆಲಸಕ್ಕೆ ಹಾಜರಾಗಲು ತಿಳಿಸುವ ಸಾರ್ವಜನಿಕ ನೋಟೀಸ್', 'ಕೆಲಸಕ್ಕೆ ವರದಿ ಮಾಡಿಕೊಳ್ಳುವುದಕ್ಕಾಗಿ ನೋಟೀಸ್', ಇತ್ಯಾದಿ ದಾಖಲೆಗಳ ಪ್ರತಿಗಳನ್ನು ಸಲ್ಲಿಸಿದ್ದು, ಸದರಿ ದಾಖಲೆಗಳ ಪೈಕಿ ಸ್ಥಳ ಪರಿವೀಕ್ಷಣಾ ವರದಿ, ದಿ:07/07/17ರ ವರದಿ, 'ಕೆಲಸಕ್ಕೆ ಹಾಜರಾಗಲು ತಿಳಿಸುವ ಸಾರ್ವಜನಿಕ ನೋಟೀಸ್', ಕೆಲಸಕ್ಕೆ ವರದಿ ಮಾಡಿಕೊಳ್ಳುವುದಕ್ಕಾಗಿ ನೋಟೀಸ್' ಗಳಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿರುವುದು ಕಂಡು ಬಂದಿದ್ದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಹಿ ಇಲ್ಲ. ಸದರಿ ದಾಖಲೆಗಳು ಪಂಚಾಯತ್‌ನಲ್ಲಿ ಇರಬೇಕಿದ್ದು, ದೂರುದಾರರಿಗೆ ಹೇಗೆ ದೊರೆಯಿತು ಎಂಬ ಮಾಹಿತಿಯು ಲಭ್ಯವಿಲ್ಲ. ಬಹುಶಃ ಸದರಿ ದಾಖಲೆಗಳನ್ನು ಪಂಚಾಯತ್ ವತಿಯಿಂದಲೇ ಭರ್ತಿ ಮಾಡಿ ಇಡಲಾಗಿತ್ತೆಂದು ಕಂಡು ಬಂದಿದೆ. ಎಂಜಿಎನ್‌ಆರ್‌ಇಜಿ ಯೋಜನೆಯಡಿ ಕೊಟ್ಟಿಗೆ ನಿರ್ಮಾಣ ಮಾಡಲು ದೂರುದಾರರು ಅರ್ಹ ಫಲಾನುಭವಿಯೇ ಎಂದು ಮೊದಲೇ ಪರಿಶೀಲಿಸದೇ, ಬೇಕಾದ ದಾಖಲೆಗಳನ್ನು ಪಂಚಾಯತ್ ವತಿಯಿಂದ ಮೊದಲೇ ಭರ್ತಿ ಮಾಡಿಕೊಳ್ಳಲಾಗಿದೆಯೆಂದು ಕಂಡು ಬಂದಿದೆ. ದೂರಿನ ಆಪಾದನೆಗಳನ್ವಯ, ದೂರುದಾರರು ಸಾಲ ಮಾಡಿ ದನದ ಕೊಟ್ಟಿಗೆಯನ್ನು ನಿರ್ಮಾಣ ಮಾಡಿದ್ದಾರೆಂದು ಕಂಡು ಬಂದಿದೆ. ದೂರುದಾರರಿಗಾದ ಸದರಿ ತೊಂದರೆಗೆ 1ನೇ ಎದುರುದಾರರು ನೇರವಾಗಿ ಹೊಣೆಗಾರರಾಗಿದ್ದಾರೆ;

5) ದಿನಾಂಕ:18/09/17ರಂದು 3ನೇ ಎದುರುದಾರರು ನೀಡಿರುವ ತಾಂತ್ರಿಕ ಕಾರ್ಯಸಾಧ್ಯತೆ ವರದಿ ಈ ಕೆಳಗಿನಂತಿದೆ –

**"ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ 2017-18**

**ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಚ್.ಡಿ.ಕೋಟೆ ತಾಲ್ಲೂಕು**

| **ತಾಂತ್ರಿಕ ಕಾರ್ಯಸಾಧ್ಯತೆ ವರದಿ** | | |
|---|---|---|
| 1 | ಫಲಾನುಭವಿಯ ಹೆಸರು | ಹೆಚ್.ಆರ್.ಕೃಷ್ಣಪ್ಪ ಬಿನ್ ರಂಗೇಗೌಡ |
| 2 | ವಿಳಾಸ | ಸವ್ವೆ, ಹೆಚ್.ಡಿ.ಕೋಟೆ ತಾಲ್ಲೂಕು |
| 3 | ಜಾಬ್ ಕಾರ್ಡ್ ನಂ. | |

| | | |
|---|---|---|
| 4 | ಉದ್ದೇಶ | ಹಸುವಿನ ಕೊಟ್ಟಿಗೆ ನೆಲಹಾಸು ಮೇವಿನಚರಣಿ ಮತ್ತು ಗಂಜಲ ತೊಟ್ಟಿ ನಿರ್ಮಾಣ |
| 5 | ಫಲಾನುಭವಿ ಹೊಂದಿರುವ ರಾಸುಗಳ ಸಂಖ್ಯೆ: **ಹಸು**/ ಕುರಿ/ ಆಡು/ ಕೋಳಿ | 05 |
| 6 | ಹಸುವಿನ ಕೊಟ್ಟಿಗೆ ನೆಲಹಾಸು/ ಕುರಿ ಅಥವಾ ಆಡಿನ ಕೊಟ್ಟಿಗೆ ನಿರ್ಮಾಣ/ ಕೋಳಿ ಶೆಡ್ ನಿರ್ಮಾಣ ಮಾಡಲು ಲಭ್ಯವಿರುವ ಜಾಗ | ಉದ್ದ : 30 ಅಡಿ<br>ಅಗಲ : 15 ಅಡಿ |
| 7 | ಅಂದಾಜು ಮೊತ್ತ | 0.43 (ಲಕ್ಷಗಳಲ್ಲಿ) |
| 8 | ಜಾತಿ | ಸಾಮಾನ್ಯ |

ತಾಂತ್ರಿಕ ಶಿಫಾರಸ್ಸು: ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಯಂತೆ ಮೇಲ್ಕಂಡ ಫಲಾನುಭವಿಯು ಅರ್ಹನಾಗಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸ ಬಹುದಾಗಿದೆ.

ಸಹಿ/-
ಸಹಾಯಕ ನಿರ್ದೇಶಕರು
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳು
ಪಶು ವೈದ್ಯ ಆಸ್ಪತ್ರೆ, ಹೆಗ್ಗಡದೇವನ ಕೋಟೆ

ಸ್ಥಳ :- ಹೆಚ್.ಡಿ.ಕೋಟೆ
ದಿನಾಂಕ:- 18/09/2017

6) ಸದರಿ ವರದಿಗೆ ತದ್ವಿರುದ್ಧವಾಗಿ 1ನೇ ಎದುರುದಾರರ ಸ್ಥಳ ಪರಿಶೀಲನಾ ವರದಿ\ ಪಂಚನಾಮ ವರದಿಯ ಪ್ರತಿ ಲಭ್ಯವಿದೆ. ಸದರಿ ದಾಖಲೆ ಈ ಕೆಳಗಿನಂತಿದೆ –

**"ಸ್ಥಳ ಪರಿಶೀಲನಾ ವರದಿ\ ಪಂಚನಾಮ ವರದಿ**

ದಿನಾಂಕ:30/11/2017ರಂದು ಶ್ರೀಮತಿ.ಸಣ್ಣಮ್ಮ ಕೋಂ ಕೃಷ್ಣಪ್ಪ.ಹೆಚ್.ಆರ್. ಇವರ ಮನೆ ಸ್ಥಳ \ ಕೊಟ್ಟಿಗೆ ಸ್ಥಳ ಪರಿಶೀಲಿಸಿದಾಗ ಯಾವುದೇ ಜಾನುವಾರು ಹಾಗೂ ಕುರಿಗಳನ್ನು ಹೊಂದಿಲ್ಲವೆಂದು ಇವರ ಸಮಕ್ಷಮ ಪರಿಶೀಲಿಸಲಾಗಿದೆ.

| ಹೆಸರು | ಸಹಿ |
|---|---|
| 1. ರತ್ನಮ್ಮ | ಸಹಿ ಮಾಡಿದೆ |
| 2. ಮಹದೇವಮ್ಮ | ಸಹಿ ಮಾಡಿದೆ |
| 3. ಶ್ರೀಮತಿ.ಗಾಯತ್ರಿ | ಸಹಿ ಮಾಡಿದೆ |
| 4. ಈರನಾಯಕ | ಸಹಿ ಮಾಡಿದೆ |
| 5. ಶಿವರಾಮು | ಸಹಿ ಇಲ್ಲ |

ಸಹಿ/-
ಪಂಚಾಯತ್ ಅಭಿವೃದ್ಧಿ ಅಧಿಕಾರಿ,
ಸವ್ವೆ ಗ್ರಾಮ ಪಂಚಾಯತ್,
ಹೆಚ್.ಡಿ.ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ.

7) ಸದರಿ ಸ್ಥಳ ಪರಿಶೀಲನಾ ವರದಿ\ ಪಂಚನಾಮ ವರದಿಗೆ ಲಗತ್ತಾಗಿ ಒಂದು ಭಾವಚಿತ್ರ ಮತ್ತು ಅದರ ಕೆಳಗೆ 1ನೇ ಎದುರುದಾರರು ಈ ಕೆಳಗಿನಂತೆ ನಮೂದಿಸಿದ್ದಾರೆ –

"ಶ್ರೀಮತಿ.ಸಣ್ಣಮ್ಮ w/o H.R.ಕೃಷ್ಣಪ್ಪ ಇವರ ಪತಿಯಾದ ಶ್ರೀ.ಕೃಷ್ಣಪ್ಪ ರವರು ಬೇರೆ ದನಗಳನ್ನು, ಅಕ್ಕಪಕ್ಕದ ದನಗಳನ್ನು ಹಿಡಿದುಕೊಂಡು ಫೋಟೋ ತೆಗೆಸಿ ಗ್ರಾಮ ಪಂಚಾಯತ್‌ಗೆ ಸುಳ್ಳು ದಾಖಲೆ ಸಲ್ಲಿಸಿರುವುದು.

ಸಹಿ/–
ಪಂಚಾಯತ್ ಅಭಿವೃದ್ಧಿ ಅಧಿಕಾರಿ,
ಸವ್ವೆ ಗ್ರಾಮ ಪಂಚಾಯತ್,
ಹೆಚ್.ಡಿ.ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ."

8) ದಿನಾಂಕ:08/12/17ರಂದು ನಡೆದ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಪ್ರತಿಯನ್ವಯ ದೂರುದಾರರಿಗೆ ಹಸುಗಳೇ ಇಲ್ಲದಿರುವುದರಿಂದ ಸದರಿಯವರಿಗೆ ಕೊಟ್ಟಿಗೆ ನೀಡಲು ಬರುವುದಿಲ್ಲವೆಂದು ಪಂಚಾಯಿತಿಯು ತೀರ್ಮಾನಿಸಿದೆ;

9) ಮೇಲಿನ ಅಂಶಗಳನ್ನು ಪರಿಗಣಿಸಿದಾಗ, 3ನೇ ಎದುರುದಾರರು ಸ್ಥಳ ಪರಿಶೀಲನೆ ನಡೆಸದೇ ದಿನಾಂಕ:18/09/17ರ ತಾಂತ್ರಿಕ ಕಾರ್ಯಸಾಧ್ಯತೆ ವರದಿಯನ್ನು ನೀಡಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

10) 2ನೇ ಎದುರುದಾರರು ಸವ್ವೆ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ಸದರಿಯವರ ಕಾರ್ಯಾವಧಿ ದಿ:10/01/19ಕ್ಕೆ ಮುಕ್ತಾಯಗೊಂಡಿರುವುದು ಸೇವಾ ವಿವರದಲ್ಲಿ ಕಂಡು ಬಂದಿದೆ;

11) 4ನೇ ಎದುರುದಾರರು ಹೊರ ಗುತ್ತಿಗೆ ನೌಕರರಾಗಿದ್ದಾರೆಂದು ಸದರಿಯವರ ಸೇವಾ ವಿವರದಲ್ಲಿ ಕಂಡು ಬಂದಿದೆ. ಕಾರಣ, ಸದರಿಯವರ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮಾವಳಿಗಳಡಿ ಇಲಾಖಾ ವಿಚಾರಣೆಯನ್ನು ನಡೆಸಲು ಆಗುವುದಿಲ್ಲ.

11. ಮೇಲೆ ಹೇಳಿರುವ ಕಾರಣಗಳಿಗಾಗಿ, 2 ಮತ್ತು 4ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 3ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಅದಲ್ಲದೆ, 1 ಮತ್ತು 3ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

20-11-20

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**

2014